<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 3599-2012

ಸಿಡಬ್ಲೂ - 113 ಪಿಡಬ್ಲೂ-21

| | |
|---|---|
| ಸಾಕ್ಷಿದಾರರ ಹೆಸರು | : ಜ್ಞಾನೇಶ್ವರರಾವ್ |
| ತಂದೆಯ ಹೆಸರು | : ದಯಾಶಂಕರರಾವ್ |
| ವಯಸ್ಸು | : 81 ವರ್ಷ |
| ಕೆಲಸ | : ನಿವೃತ್ತ ನೌಕರ |
| ವಾಸ | : ಮಂಜುನಾಥನಗರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 22-01-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

2008 ನೇ ಇಸವಿಯಲ್ಲಿ ಐಶ್ವರ್ಯ ಪ್ರಾಜೆಕ್ಟ ರವರು ಗ್ಲೋಬಲ್ ಸಿಟಿ ಎಂಬ ಹೆಸರಿನಲ್ಲಿ ಬೆಂಗಳೂರು ಉತ್ತರ ತಾಲೂಕಿನಲ್ಲಿ ಬಡಾವಣೆ ಮಾಡುವುದಾಗಿ ಸದರಿ ಕಂಪನಿಯ Representatives ಬಂದು ನಮಗೆ ತಿಳಿಸಿ, ಇಚ್ಚೆ ಇದ್ದರೇ ನಿವೇಶನಗಳನ್ನು ಕಾಯ್ದಿರಿಸುವಂತೆ ಹೇಳಿರುತ್ತಾರೆ. ನಂತರ ನಾನು 2 ನಿವೇಶನ ಸಂಖ್ಯೆ 724 ಮತ್ತು 726 ಗಳನ್ನು ಒಟ್ಟು ರೂ. 17 ಲಕ್ಷ 96 ಸಾವಿರಗಳಿಗೆ ಖರೀದಿಸಲು ತೀರ್ಮಾನ ಮಾಡಿ, ಆ ಪೈಕಿ ರೂ.6 ಲಕ್ಷ 85 ಸಾವಿರಗಳನ್ನು ನಗದು ಮತ್ತು ಚೆಕ್ಕುಗಳ ಮೂಲಕ ಮುಂಗಡವಾಗಿ ನೀಡಿರುತ್ತೇನೆ. ಅದಕ್ಕೆ ಪ್ರತಿಯಾಗಿ ಅವರು ರಶೀದಿಗಳನ್ನು ನೀಡಿದ್ದರು. ಸುಮಾರು ವರ್ಷಗಳು ಕಳೆದರು ಅವರು ನಿವೇಶನಗಳನ್ನು ಮಾಡಿರುವುದಿಲ್ಲ. ಈ ವಿಚಾರವಾಗಿ ನಾವು ಸುಮಾರು ಬಾರಿ ಅವರನ್ನು ಅಂದರೆ 1 ನೇ ಆರೋಪಿಯನ್ನು ಬೇಟಿಯಾಗಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾವು ಕೇಳಿದಾಗ 1 ನೇ ಆರೋಪಿ ತಾವು ಮಾಡುತ್ತಿರುವುದಾಗಿ ಆಶ್ವಾಸನೆ ಕೊಡುತ್ತಿದ್ದರು. ಆದರೆ ಅವರು ನಿವೇಶನಗಳನ್ನು ಮಾಡಿರುವುದಿಲ್ಲ. ಈ ರೀತಿ ಮಾಡಿದ ಪ್ರಾಜೆಕ್ಟಗಳನ್ನು ಪೂರ್ಣಗೊಳಿಸದೇ ಇದ್ದ ಕಾರಣ ಹಣ ಕೊಟ್ಟವರೆಲ್ಲ

ಗಲಾಟೆ ಮಾಡಿ, ಪೋಲೀಸ್ ದೂರನ್ನು ಕೊಟ್ಟಿರುತ್ತಾರೆ. ನಾನು ಸಹ ಈ ಕುರಿತು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.42 ಎಂದು ಸಾಕ್ಷಿಯ ಸಹಿಯನ್ನು ನಿಪಿ.42ಎ ಎಂದು ಗುರುತಿಸಲಾಯಿತು. ನನ್ನ ಮತ್ತು 1 ನೇ ಆರೋಪಿಯ ನಡುವೆ ಆದ ವ್ಯವಹಾರದ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ, ನಾನು ಅದನ್ನು ಹಾಜರುಪಡಿಸುತ್ತೇನೆ.

(ಈ ಹಂತದಲ್ಲಿ ಮೂಲ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ